RegaNo BG 155

— ಶ್ರೀ —

3—2—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರ್ತಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಆಗಮನ

ನೊಬೆಲ್ ಬಹುಮಾನ ಪಡೆದ ಪೊ ಫೆಸರುಗಳಾದ ಹೆಚ್ ಸಿ ಉರೆ ಮತ್ತು ಎಫ್. ಬ್ಲಾಚ್ ತಮ್ಮ ಪತ್ನಿಯರೊಂದಿಗೆ ಈ ದಿನ ಬೆಂಗಳೂರಿಗೆ ಆಗ ಮಿಸಿದರು. ಅವರು ಬಂಡೀಪುರ, ಬೃಂದಾವನ, ಶ್ರವಣ ಬೆಳುಗೊಳ, ಹಳೇ ಬೀಡು ಈ ಸ್ಥಳಗಳಿಗೆ ಭೇಟಿಕೊಡುವರು

ತಂದೆತಾಯಿಗಳಿಗೆ ಹಿತೋಕ್ತಿ

ಬೆಂಗಳೂರು ಸಬ್ ಜಡ್ಜ್ ಶ್ರೀ ಗುಡೂರು ಶ್ರೀನಿವಾಸರಾಯುರು ಬೆಂಗ ಳೂರು ಗಾಂಧಿ ನಗರದ ಶಾಲೆಯಲ್ಲಿ ಭಾಷಣಮಾಡುತ್ತಾ, ತಂದೆತಾಯಿಗಳು ಗುಣಯುತ ಜೀವನ ಮಾಡಬೇಕೆಂದು ಅದು ಮಕ್ಕಳಿಗೆ ಆದರ್ಶವಾಗಿರುವದೆಂದೆ ನುಡಿದರು.

ಮಹಿಳೆ ಮೇಲೆ ಅತ್ಯಾಚಾರ

ಬಕ್ಕಯ್ಯಾಂ' ಸಿಂಗ್' ಕುಶಾಲ್' ಸಿಂಗ್' ಎಂಬ ಕಬ್ಬಿಣದ ಆದಿರು ಸಾಗಿ ಸುವ ಟ್ರಕ್‌ನ ಡ್ರೈವರನು ಮಹಿಳೆಯೋರ್ವಳ ಮೇಲೆ ಅತ್ಯಾಚಾರ ನಡೆಸಿದ ಆರೋಪದ ಮೇಲೆ ಬಂಧಿತನಾಗಿದ್ದಾನೆ ಮಹಿಳೆ ನುಡ್ಡಿನನಳು ಅ ವಳು ಟ್ರಕ್ಕನ್ನು ಬಲೆಗುಲಿಯಲ್ಲಿ ಹತ್ತಿದಳೆಂದು ಕಾರವಾರಕ್ಕೆ 10 ಮೈಲಿಗಳ ದೂರದ ಅಮದಳ್ಳಿಯಲ್ಲಿ ಅವಳು ಇಳಿಯಲಿದ್ದಳೆಂದು ಪೋಲೀಸರು ತಿಳಿಸಿರುವರು ಜನ ರಾರೂ ಇಲ್ಲದ ಪ್ರದೇಶದಲ್ಲಿ ಟ್ರಕ್ ನಿಲ್ಲಿಸಿ, ಅರಣ್ಯ ಪ್ರದೇಶಕ್ಕೆ ಅವಳನ್ನು ಬಲ ವಂತವಾಗಿ ಎಳೆದು ಅತ್ಯಾಚಾ ಮಾಡಿದನೆಂದು ಪೋಲೀಸರು ತಿಳಿಸಿದ್ದಾರೆ ಜತೆ ಯಲ್ಲೇ ಪ್ರಯಾಣ ಮಾಡಿದ ಕೊಲ್ಲೆಯ ಪೋಲೀಸರು ಪಟೇಲರಾದ ಶೀ ಕುಶಲಿ ಮಹದೇವ ನಾಯುಕರು ಈ ವಿಷಯವನ್ನು ಕಾರ್ವಾರದ ಪೋಲೀಸ್‌ಗೆ ವಂದಿ ಪಡಿಸಿದರು. ಡ್ರೈವರನನ್ನು ಈಗ ಜಾಮೀನು ಮೇಲೆ ಬಿಟ್ಟಿದೆ.

ಂ ಂ

ತನ್ನ ಅಸ್ತಿಪಾಸ್ತಿಗಳ ವಿಚಾರದಲ್ಲಿ ಸುಳ್ಳು ಹೇಳಿಕೆಗಳನ್ನಿತ್ತ ಹಾಗೂ ತನ್ನ ವಂಮಾನಕ್ಕೆ ಅಸಮ ಪ್ರಮಾಣದ ಅಸ್ತಿಪಾಸ್ತಿಗಳನ್ನು ಪಡೆದಿದ್ದ ಅಪಾದನೆ ಮೇಲೆ ಲೂಧಿಯಾನಾದಲ್ಲಿರುವ ಉತ್ತರ ರೈಲ್ವೆಯ ವರ್ಕ್ಸ್ ಇಂಜಿನಿಯರನು ಕೆಲ ಸದಿಂದ ವಜಾ ಮಾಡಲ್ಪಟ್ಟಿದಾನೆ.

ಸುಪ್ರಸಿದ್ಧ ಸಾಮಾಜಿಕ ಕಾರ್ಯಕರ್ತರಾದ ಶ್ರೀ ದಿನಕರ ದೇಸಾಯಿ ಇವರು ಅಂಕೋಲಾದಲ್ಲಿ ಹೇಳಿಕೆಯಿತ್ತು, ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ವಿರೋಧ ಪಕ್ಷ ಅವಶ್ಯಕವಾಗಿದೆ ಎಂದರು. ಯಾರೂ ಪ್ರಶ್ನಿಸದ ಸ್ಥಿತಿಯಿಂದ ದೆಸೆಯಿಂದ ಕಾಂಗ್ರೆಸು ಪಕ್ಷ ತನ್ನ ಶುದ್ಧತೆ ಹಾಗೂ ಸತ್ವವನ್ನು ಕಳೆದುಕೊಂಡಿದೆ ಎಂದರು.

ಯುದ್ಧ ಪೂರ್ವ ಹಾಗೂ ಯುರೋಪಿಯನ್ ರಾಷ್ಟ್ರಗಳ ಸುತ್ತ ನಿರ್ದಿಷ್ಟವಾಗಿ ಇಟಲಿಯಲ್ಲಿ ಪಾಕಿಸ್ತಾನ, ಕಾಶ್ಮೀರ ಬಗ್ಗೆ ಭಾರತದ ವಿರುದ್ಧ ಅಪ ಪ್ರಚಾರ ಆರಂಭಿಸಿದೆ ಎಂದು ರೈರೋವಿನಿಂದ ವಾರ್ತೆ ಬಂದಿದೆ

ಈ ವರ್ಷ ಭಾರತ ಮತ್ತು ಬ್ರಿಟೀರಿಯಾ ೂ 4 ಕೋಟಿಗಳ ವ್ಯಾಪಾರ ಮಾಡಿದೆ.

ಮುಂಬಾಗಿಲಿನಲ್ಲಿ ಅಪ್ಪಗ್ರಹಯೋಗ ಬಗ್ಗೆ 9 ದಿನಗಳ ಶಾಂತಿಯುಜ್ಞ ನಡೆಯುತ್ತಿದೆ.

ಉಪವಾಸ ವ್ರತ

ನೆಲ್ಲೂರು ಏ ಆರ್ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರ ಆರಂಭವಾಗಿ 52 ದಿನಗಳು ಆದವು ವಿದ್ಯಾರ್ಥಿಗಳಾದ ಆರ್. ಕೃಷ್ಣಕಿಶೋರ್ ಹಾಗೂ ಎಂ ಹೆಚ್ ಸರ್ಕಾರ್ ಉಪವಾಸ ಆರಂಭಿಸಿರುವರು. ನೆಲ್ಲೂರು ಜಿಲ್ಲೆಯ ಕಾಂಗ್ರೆಸು ಸಮಿತಿ ಅಧ್ಯಕ್ಷ ಶ್ರೀ ಆರ್ ಸಂಜೀವ ರೆಡ್ಡಿಯವರು ತಿರುಪತಿ ವಿಶ್ವವಿದ್ಯಾನಿಲಯದ ಉಪಸ್ಥಾನಪತಿಯವರು ರಾಜೀನಾಮೆ ಕೊಡುವಂತೆ ಒತ್ತಾಯ ಮಾಡಿರುವರು

ಇದ್ದರೂ ಸತ್ತಾಕೆ !

23 ವರ್ಷದ ಪಾಲಿನ್ ಮೆಗಿ ಎಂಬ ಲಂಡನ್ನಿನ ವೈಟಿಸ್ ಇದ್ದೂ ಸತ್ತವಳು ಆಗಿದ್ದಾಳೆ ಥೇವ್ಸ್ ನದಿಯಲ್ಲಿ ಅವಳ ಶವವನ್ನು ಕಂಡುದಾಗಿ ಅವಳ ಸ್ನೇಹಿತ ಹೇಳಿದ ಅವಳು ಮರಣಹೊಂದಿದಳೆಂ ಬುದಾಗಿ ತನಿಖೆಯಲ್ಲಿ ಬರೆದಿದೆ ಅವಳು ಬದುಕಿರುವಳೆಂದು ಹೈಕೋರ್ಟು ಸರ್ಟಿ ಫಿಕೇಟು ಕೊಡಬೇಕು

ಂ ಂ

ಅಮೆರಿಕಾದ ಆಹಾರ ಸಹಾಯವನ್ನು ಹೆಚ್ಚಿಸುವ ಸಲುವಾಗಿ ಮಾತುಕತೆ ನಡೆ ಸಲು ಈವರೆಗೂ ಅಮೆರಿಕದ ಉನ್ನತ ಅ ಧಿಕಾರಿಗಳು ನಾಳೆ ಭಾರತಕ್ಕೆ ಬರುವರು

ಡಿ ಸುಬ್ಬಯಾ ಂಸ್ಕೆಯಲ್ಲಿರುವ ಮ ಹಾತ್ಮಾ ಗಾಂಧಿ ಸೇವಾ ಸಂಘದಲ್ಲಿ ನಾಳೆ ಸಂಜೆ ಶ್ರೀಮತಿ ಪ್ರೇಮಾ ವತ್ತು ಪಟಿಯವರು ಹಾಡುಗಾರಿಕೆ

ಡಚ್ ನ್ಯೂಗಿನಿಗೆ ಹೋಗಬೇಕಾಗಿದ್ದ ಡಚ್ಚರ ಎಂಡು ಸೇನಾ ವಿಮಾನ ಹಾಲೆಂಡಿಗೆ ವಾಪಸಾದವು ಟೋಕಿಯೋದಲ್ಲಿ ಅವು ಇಳಿಯಲು ಅವಕಾಶ ಸಿಗಲಿಲ್ಲ

ಅಪ್ಪಗ್ರಹಗಳು ಸೇರುವ ದಿನ ಹತ್ತಿರ ಹತ್ತಿರ ಬರುತ್ತ ಕಲ್ಕತ್ತಾದಲ್ಲಿ ಜನರು ತುಂಬಾ ಗಾಬರಿ ಆಗಿದ್ದಾರೆ

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪಕ್ಕೃಷ್ಣ ಜೋಯಿಸರಿಂದ

4 ಅಮಾವಾಸ್ಯೆ ಉತ್ತರಾಷಾಢ

ವಿವಿಧ ವಿಷಯಗಳು

ರಾಜಮಹೇಂದ್ರಿಯ ಕೇಂದ್ರ ಜೈಲಿನ ವೆಂಕಟರವಮಯ್ಯ, ಪೀರಯ್ಯ, ಪೆಡ ರಾವು ಅಯ್ಯ ಮತ್ತು ವೆಂಕಟಸ್ವಾಮಿ ಇವರಿಗೆ ವರ್ಣ ದಂಡನೆ ವಿಧಿಸಿತ್ತು ಅ ವರು ಅಧ್ಯಕ್ಷರಿಗೆ ಪ್ರಾಣ ಭಿಕ್ಷೆ ಅರ್ಜಿ ಸಲ್ಲಿಸಿದ್ದರು ಅವರಿಗೆ ಪ್ರಾಣಭಿಕ್ಷೆ ಸಿ ಕ್ಕಿತು

ಕಮ್ಯೂನಿಸ್ಟು ಪಕ್ಷ ನಿಜವಾಗಿಯೂ ಭಾರತೀಯವಲ್ಲವೆಂದು ಕಾಂಗ್ರೆಸು ಅ ಧ್ಯಕ್ಷ ಶ್ರೀ ಎಸ್ ಸಂಜೀವರೆಡ್ಡಿಯವರು ರಾಜಕೋಟೆಯಲ್ಲಿ ತಿಳಿಸಿರುವರು.

ಸುಪ್ರೀಂ ಸೋವಿಯಟ್‌ಗೆ ಡೆಪ್ಯುಟಿ ಆಗಿ ಮಾಸ್ಕೋ ಜಿಲ್ಲೆಯ ಕಾಲಿನಿನ್ ಕ್ಷೇತ್ರದಿಂದ ಆಯ್ಕೆದ ಪ್ರಧಾನಿ ಕ್ರುಶ್ಚೇವ ರು ಉಮೇದುವಾರರಾಗಿದ್ದಾರೆ

ತಮ್ಮ ಈಗಿನ ಪರಿಸ್ಥಿತಿ ವ್ಯಕ್ತಪಡಿಸುವ ಸಲುವಾಗಿ ಕಾಸ್ಮಾಂದ ನಾರ್ತ್ ಗೆಜೆಟೆಡ್ ಉದ್ಯೋಗಿಗಳು ಯಾವ ರಾಜಕೀಯ ಪಕ್ಷಗಳಿಗೂ ಓಟು ಮಾಡಕೂಡದೆಂದ ನಿರ್ಧರಿಸಿರುವರು ಯಾವ ರಾಜಕೀಯ ಪಕ್ಷಗಳು ತಮಗೆ ಅನುಕೂಲವನ್ನು ಮಾಡಿಲ್ಲವೆಂದು ಅವು ಅಭಿಪ್ರಾಯ.

ಅಗತ್ಯ ಬಳಕೆ ಪದಾರ್ಥಗಳ ಮೇಲೆ ತೆರಿಗೆ ರದ್ದುಮಾಡಬೇಕೆಂದು ಕೇರಳದ ಮಾಜಿ ಮುಖ್ಯ ಮಂತ್ರಿ ಶ್ರೀ ಶಂಕರ್ ನಂಬೂದರಿಪಾದರು ಮದ್ರಾಸಿನಲ್ಲಿ ನಿನ್ನೆ ತಿಳಿಸಿದ್ದಾರೆ.

ಕಮಲಾಪುರಂ ತಾಲ್ಲೂಕಿನ ಅನಿಮೆಳ ಗ್ರಾಮದಲ್ಲಿ ಒಂದ ಸ್ಥಳದಲ್ಲಿ ಬಾವುಟ ಹಾರಿಸುವ ವಿಷಯದಲ್ಲಿ ಎರಡು ಪಕ್ಷಗಳ ವರಿಗೆ ಘರ್ಷಣೆಯಾಗಿ ಅಗ್ನಿ ಅಸ್ತ್ರ ಗಳನ್ನು ಉಪಯೋಗಿಸಿದರು ಈ ವರೆಗೆ ಯಾರನ್ನೂ ಪೋಲೀಸರು ಬಂಧಿಸಿಲ್ಲ.

ನೇಪಾಳದ ಮುಸ್ತಾಂಗ ಪ್ರದೇಶದಲ್ಲಿ ಯಾವುದೋ ವಿಮಾನ ಕಂಪನಿ ದಳಗಳಿಗೆ ಆಯುಧಗಳನ್ನು ಕೊಡತ್ತಿದೆ ಎಂದು ಖಟಮಂಡುವಿನಲ್ಲಿ ಪ್ರಕಟವಾಗಿದೆ ಕಂಪನಿ ಚಟುವಟಿಕೆ ಮುಂದಿಟ್ಟುಕೊಂಡು ನೇ ಪಾಳಕ್ಕೆ ಚೀನಾ ನುಗ್ಗುವ ಭೀತಿ ಇದೆ.

ಅಪ್ಪಗ್ರಹ ಶಾಂತಿಕಾರ್ಯಗಳಿಗಾಗಿ ನಾಳೆ ಸತ್ಯವಾದಿ ಕಚೇರಿಗೆ ರಜ

ಚಿನ್ನವಶ

1961 ರಲ್ಲಿ ಕಳ್ಳ ಸಾಗಾಣಿಕೆಯಲ್ಲಿ ಇದ್ದ ಒಟ್ಟು 3 ಲಕ್ಷಕ್ಕೂ ಹೆಚ್ಚು ಕೊಲಗಳಷ್ಟು ಬೆಲೆಬಾಳುವ ಚಿನ್ನವನ್ನು ಸುಂಕ ಹಾಗೂ ಅಬ್ಕಾರಿ ಅಧಿಕಾರಿಗಳು ವಶನೂಡಿಕೊಂಡಿರುವರು.

ನಿರ್ಗಮನ

ಬೊಂಬಾಯಿನ ಸಂಕಕ್ಯುಜ್ ಏರ್ಪಾನ ನಿಲ್ದಾಣದಿಂದ ಗುರುವಾರ ಬೆಳಿಗ್ಗೆ ಸಂಯುಕ್ತ ಅರಬ ಗಣರಾಜ್ಯದ ಉಪಾಧ್ಯಕ್ಷರಾದ ಫೀಲ್ಡ್ ಮಾರ್ಷಲ್ ಅಬ್ದಿಲ್ ಹಕೀಂ ಅಮಿರ್ ಸ್ವದೇಶಕ್ಕೆ ನಿರ್ಗಮಿಸಿದರು. ಬೊಂಬಾಯಿನ ರಾಜ್ಯಪಾಲರಾದ ಶ್ರೀ ಶ್ರೀಪ್ರಕಾಶರು ಮುಂತಾದ ವರು ಅವರನ್ನು ಬೀಳ್ಕೊಟ್ಟರು.

ನೂತನ ಅಧ್ಯಕ್ಷರು

ಭಾರತ ರಿಸರ್ವ ಬ್ಯಾಂಕಿನ ಡೆಪ್ಯುಟಿ ಗವರ್ನರ್‌ರಾದ ಶ್ರೀ ಬಿ ವೆಂಕಟಪ್ಪಯ್ಯ ನವರು ಮಾರ್ಚ್ 1 ರಿಂದ ಭಾರತ ಸ್ಟೇಟ್ ಬ್ಯಾಂಕಿನ ಅಧ್ಯಕ್ಷರಾಗುವರು.

ಸ್ವತಂತ್ರ ಪಕ್ಷದವರಿಗೆ ಏಟು

ಚುನಾವಣೆಗೆ ಸ್ಪರ್ಧಿಸುವ ಕೆಲವು ಉಮೇದುವಾರರ ವಿರುದ್ಧವಾಗಿ ಹಳೆ ಕಾಲದ ಕಾಂಗ್ರೆಸಿಗರಾದ ಶ್ರೀ ಬಸಪ್ಪ ಪುರಾಣಿಕರು ಕ್ಯಾನ್ವಾಸ್ ಮಾಡುತ್ತಿದ್ದಾಗ ಯಾರೋ ಅವರನ್ನು ಬಲವಾಗಿ ತಳ್ಳಿದರು. ಇತ್ತೀಚೆಗೆ ಸ್ವತಂತ್ರ ಪಕ್ಷಕ್ಕೆ ಸೇರಿದ ಬಸವ ಪುರಾಣಿಕರು ಈ ವಿಷಯದಲ್ಲಿ ಪೋಲೀಸರಿಗೆ ದೂರು ಇತ್ತಿದ್ದಾರೆ ಎಂದು ಬಿಜಾಪುರದಿಂದ ವರದಿ ಬಂದಿದೆ

ಹೃದ್ರೋಗ

ಮಾಸ್ಕೋದಿಂದ ಬಂದಿರುವ ವರದಿ ಪ್ರಕಾರ ರಷ್ಯದ ಮಾಜಿ ವಿದೇಶ ಮಂತ್ರಿ ಮಾಲಟೋವರು ಹೃದಯವೇದನೆಯಿಂದ ನರಳುತ್ತಿರುವರು.

ಸಮ್ಮೇಳನ

ಭಾರತದ ವಿಶೇಷ ಪುಸ್ತಕ ಭಾಂಡಾರಗಳು ಮತ್ತು ವಾರ್ತಾ ಕೇಂದ್ರಗಳ 4 ನೆಯ ಸಮ್ಮೇಳನ ಧನಬಾದಿನಲ್ಲಿ 14 ರಿಂದ 17 ರ ವರಿಗೆ ನಡೆಯುವುದು

ಸಹ ಯೋಗ

ಭಾರತದಲ್ಲಿ ಕೋಳಿ ಸಾಕಣೆ ಅಭಿವೃದ್ಧಿ ಮಾಡಲು ವಿದೇಶಗಳಿಂದ ಸಹಯೋಗವನ್ನು ಪಡೆದುಕೊಳ್ಳುವುದಕ್ಕೆ ಉತ್ತೇಜನ ನೀಡಲು ಭಾರತ ಸರ್ಕಾರದವರು ನಿರ್ಣಯಿಸಿರುವರು.

oo

ನವದೆಹಲಿಯಿಂದ ಬಂದಿರುವ ವರದಿ ಪ್ರಕಾರ ರೈಲ್ವೆ ಪ್ರಯಾಣಿಕರಿಗೆ ರಿಸ್ಟ್ ಕೊಡುವ ವಿಚಾರವಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಉನ್ನತಾಧಿಕಾರಿ ಸಭೆಯಲ್ಲಿ ಚರ್ಚಿಸಲಾಯಿತು

ಅಪಹರಣ

ಕರೀಂಗಂಜ್-ಸಿಲ್ಚೆಟ್ ಗಡಿಯಲ್ಲಿ ಇದ್ದ ಭಾರತ ರಕ್ಷಣಾ ಬಲದ 3 ಜನ ಪೋಲೀಸರನ್ನು ಪಾಕಿಸ್ತಾನದವರು ಅಪಹರಿಸಿರುವರು ಎಂದು ಶಿಲಾಂಗಿನಿಂದ ವರದಿ ಬಂದಿದೆ.

ಘರ್ಷಣೆ

ಹರಿಯಾಣದಿಂದ ಬಂದಿರುವ ವರದಿ ಪ್ರಕಾರ ಕೆಲವು ಕಡೆಗಳಲ್ಲಿ ಜನತೆಯಲ್ಲಿ ಜನವರಿಯಲ್ಲಿ ಚುನಾವಣೆ ಪ್ರಚಾರ ಮಾಡುತ್ತಿದ್ದ ಸಂದರ್ಭದಲ್ಲಿ ಕಾಂಗ್ರೆಸಿಗರು ಹಾಗೂ ಪಿಎಸ್‌ಪಿಯವರು ಘರ್ಷಣೆ ಮಾಡಿದರು ರಿಸರ್ವ್ ಪೋಲೀಸರನ್ನು ಕರೆಸಿದೆ.

ವುಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

ಷಮಾ (ಹಿಂದಿ) SHAMA

ಪಾತ್ರ-ಸುಂಯ್ಯ, ನಿಮ್ಮಿ, ವಿಜೆದತ್ ; ಸಂಗೀತ : ಗುಲಾಂ ಮಹಮದ್
ಅವೋಘ ಹಿಂದಿ ಕಲಾಕೃತಿ [ದಿನವಹಿ 3 ಪ್ರದರ್ಶನಗಳು]

ಆಪರಾ — 2-2-62 ರಿಂದ

ಭೂಕೈಲಾಸ (ಕನ್ನಡ)

ತಾರಾಗಣ— ರಾಜಕುಮಾರ್, ಜಮುನ, ಇ ವಿ ಸರೋಜ, ರಂಗರಾವ್
ಕಮಲಾ ಲಕ್ಷ್ಮಣ್, ಗೋಪಿ ಕೃಷ್ಣ. [ದಿನವಹಿ 3 ಆಟಗಳು]

SHAKTI SUDHA

A Superb Tonic

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.



ಬೆಳ್ಳಿ ಚಿಹ್ನೆ ಸಹಿ ಚಿನಾವಹಿ — 25-2-62
ಪವಿತ್ರನಾದ ಓಟನ್ನು ಸ್ವತಂತ್ರ ಪಕ್ಷದ ಅಭ್ಯರ್ಥಿ ಎಸ್. ಎಸ್. ನಾರಾಯಣದಾಸ್ ಇವರ ಗುರುತು ಚಿಹ್ನೆಯಾದ ಎತ್ತಿನ ಜೋಡಿಗೆ ಮತ ನೀಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3